**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ**5503/2022**

ಸಿ.ಡಬ್ಲ್ಯೂ-6 ಪಿ.ಡಬ್ಲ್ಯೂ-3

| | | |
|---|---|---|
| ಹೆಸರು | ಃ | ಅನ್ನಪೂರ್ಣಾ |
| ತಂದೆಃಗಂಡ | ಃ | ಬಸವರಾಜ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | : | ಮನೆಗೆಲಸ |
| ವಾಸಸ್ಥಳ | ಃ | ಮಡಕಿ |

ದಿನಾಂಕಃ24.01.2024

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದಃ**

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ರಿಂದ 5, 7 ರಿಂದ 11 ರವರ ಪರಿಚಯ ಇರುತ್ತದೆ.

ಸಂಜೆ ಹೊತ್ತಿನಲ್ಲಿ ನನ್ನ ಮಗ ಹಾಗೂ ಆರೋಪಿತರು ಜಗಳವಾಡುತ್ತಿದ್ದರು. ನಾನು ಜಗಳ ಬಿಡಿಸಲು ಹೋದಾಗ ಬೈಯಲು ಪ್ರಾರಂಭಿಸಿದರು ಆದ ಕಾರಣ ಪ್ರಕರಣ ದಾಖಲಿಸಿದರು. ನನ್ನ ಮಗ ಬಿಡಿಸಲು ಹೋದಾಗ ಹೊಡೆದಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.**

ದಿ.20.03.2022 ರಂದು ಸಂಜೆ 7.30 ಗಂಟೆಗೆ ಸದರಿ ಜಗಳ ಆಯಿತು ಎಂದರೆ ಸರಿ. ಲಕ್ಷ್ಮಿ ಗುಡಿಯ ಬಳಿ ಜಗಳವಾಗುವ ಶಬ್ದ ಕೇಳಿ ಚಾಸಾ-1 ರವರು ಹೋದರು ಎಂದರೆ ಸರಿ. 1 ನೇ ಆಜರೋಪಿ ಚಾಸಾ-1 ರವ ರಿಗೆ ಬಸವದೇವರ ಗುಡಿಯನ್ನು ಯಾಕೆ ಬಿಳಿಸಿ ಕಟ್ಟುತ್ತಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರ ಸರಿ. ಊರಿನಲ್ಲಿ ನೀನೇ ದೊಡ್ಡವನಾಗಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಎದೆಯ ಮೇಲಿನ ಅಂಗಿ ಹಿಡಿದು ಕಾಲಿನಿಂದ ಒದ್ದಿರುತ್ತಾನೆ ಎಂರದೆ ಸರಿ. ನಾನು ಚಾಸಾ-4, 5 ರವರು ಜಗಳ ಬಿಡಿಸಲು ಹೋದಾಗ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರ ಸರಿ. ಚಾಸಾ-4 ರವರಿಗೆ ಸೀರೆ ಹಿಡಿದು ಜಗ್ಗಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರ ಸರಿಯಲ್ಲ. ನಾನು ಚಾಸಾ-5 ರವರು ಹೋದಾಗಲೂ ಚಾಸಾ-5 ರವರಿಗೆ 2 ರಿಂದ 4 ನೇ ಆರೋಪಿ ತರು ಕೈಯಿಂದ ಕಪಾಳಕ್ಕೆ ಹೋಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ನನಗೂ ಕೈಯಿಂದ ಕಪಾಳಕ್ಕೆ ಬೆನ್ನ ಮೇಲೆ ಹೊಡೆದು ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. 3 ನೇ ಅ ರೋಪಿ ಕೈಹಿಡಿದು ಎಳೆದಾಡಿ ಸೀರೆ ಹಿಡಿದು ಜಗ್ಗಾಡಿರುತ್ತಾನೆ ಎಂದರೆ ಸರಿ. 4 ನೇ ಆರೋಪಿ ನನಗೆ ಹೊಡೆದಿರುತ್ತಾರೆ ಎಂದರೆ ಸರಿ. ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ-7 ರಿಂದ 11 ರವರು ಜಗಳ ಬಿಡಿಸಿರುತ್ತಾರೆ ಎಂದರೆ ಸರಿ. ನಾನು ಈ ರೀತಿ ಪೋಲಿಸರ ಎದುರು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಂ.ಎನ್.ಆರ್. ಹಾಗೂ ಎಸ.ಎ.ಕೆ. ವಕೀಲರಿಂದಃ**

ನಾನು 10 ನೇ ತರಗತಿ ವರಗೂ ಶಾಲೆ ಕಲಿತಿರುತ್ತೇನೆ. ಘಟನೆ 7.30 ಗಂಟೆಗೆ ನಡೆಯಿತು. ಲಕ್ಷ್ಮಿಗುಡಿಗೂ ಸರ್ಕಾರಿ ಶಾಲೆಗೂ ಸುಮಾರು 500 ಮೀಟರ ಅಂತರ ಇದೆ. ಸರ್ಕಾರಿ ಶಾಲೆಗೂ ನನ್ನ ಮನೆಗೂ 500 ಮೀಟರ ಅಂತರ ಇದೆ. ನಮಮನೆಯಿಂದ ಘಟನಾ ಸ್ಥಳಕ್ಕೆ ಹೋಗಲು 20 ನಿಮಿಷ ಬೇಕಾಗುತ್ತದೆ. ಘಟನಾ ಸ್ಥಳದ ಸುತ್ತ ಮುತ್ತಲೂ ಸುಮಾರು 5-8 ಮನೆಗಳು ಇವೆ. ನನ್ನ ಹೇಳಿಕೆಯನ್ನು ನಮ್ಮ ಜೊತೆ ಬಂದಿದ್ದ ಗಂಡು ಮಕ್ಕಳು ನೀಡಿರುತ್ತಾರೆ. ಹೇಳಿಕೆಯನ್ನು ಚಾಸಾ-1, 6 ರವರು ನೀಡಿರುತ್ತಾರೆ ನಾವು ಕೇವಲ ಜೊತೆಗೆ ಹೋಗಿದ್ದೇವು. ನಾನು ಮೊದಲ ಬಾರಿಗೆ ನ್ಯಾಯಾಲಯಕ್ಕೆ ಸಾಕ್ಷಿ ಹೇಳಲು ಬಂದಿರುತ್ತೇನೆ. ನನಗೂ, ಚಾಸಾ-1 ರವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಕೇವಲ ಪರಿಚಯ ಇರುತ್ತದೆ. ನನಗೆ ಜಗಳ ಆಗುತ್ತಿರುವ ಬಗ್ಗೆ ಶಶಿಕಲಾರವರು ಕರೆ ಮಾಡಿ ತಿಳಿಸಿದರು. ಶಶಿಕಲಾರವರ ದೂರವಾಣಿ ಸಂಖ್ಯೆ ನೆನಪಿರುವುದಿಲ್ಲ. ಘಟನಾ ಸ್ಥಳದ ಮುಂದೆ ಸಿ.ಸಿ. ರಸ್ತೆ ಇದೆ ಎಂದರೆ ಸರಿ. ಯಾವುದೇ ಘಟನೆ ನಡೆದಿರುವುದಿಲ್ಲ ಯಾವುದೇ ಜಗಳ ನಡೆದಿರುವುದಿಲ್ಲ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರ ಸರಿಯಲ್ಲ.

ಜಗಳವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗುವ ಮುನ್ನ ಎಲ್ಲರೂ ಓಡಿ ಹೋಗಿದ್ದರು ನಾನು ಘಟನೆ ನೋಡಿರುವುದಿಲ್ಲ.

ಸಂಜೆ ಹೊತ್ತಿನಲ್ಲಿ ನನ್ನ ಮಗ ಹಾಗೂ ಆರೋಪಿತರು ಜಗಳವಾಡುತ್ತಿದ್ದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಜಗಳ ಬಿಡಿಸಲು ಹೋದಾಗ ಬೈಯಲು ಪ್ರಾರಂಭಿಸಿದರು ಆದ ಕಾರಣ ಪ್ರಕರಣ ದಾಖಲಿಸಿದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಬಿಡಿಸಲು ಹೋದಾಗ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಿ.20.03.2022 ರಂದು ಸಂಜೆ 7.30 ಗಂಟೆಗೆ ಸದರಿ ಜಗಳ ಆಯಿತು ಎಂದರೆ ಸರಿ. ಲಕ್ಷ್ಮಿ ಗುಡಿಯ ಬಳಿ ಜಗಳವಾಗುವ ಶಬ್ದ ಕೇಳಿ ಚಾಸಾ-1 ರವರು ಹೋದರು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾಸಾ-1 ರವರಿಗೆ ಬಸವದೇವರ ಗುಡಿಯನ್ನುಯಾಕೆ ಬಿಳಿಸಿ ಕಟ್ಟುತ್ತಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಊರಿನಲ್ಲಿ ನೀನೇ ದೊಡ್ಡವನಾಗಿದ್ದಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈದು ಎದೆಯ ಮೇಲಿನ ಅಂಗಿ ಹಿಡಿದು ಕಾಲಿನಿಂದ ಒದ್ದಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ-4, 5 ರವರು ಜಗಳ ಬಿಡಿಸಲು ಹೋದಾಗ ಚಾಸಾ-4 ರವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-4 ರವರಿಗೆ ಸೀರೆ ಹಿಡಿದು ಜಗ್ಗಾಡಿ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರ ಸರಿಯಲ್ಲ. ನಾನು ಚಾಸಾ-5 ರವರು ಹೋದಾಗಲೂ ಚಾಸಾ-5 ರವರಿಗೆ 2 ರಿಂದ 4 ನೇ ಆರೋಪಿ ತರು ಕೈಯಿಂದ ಕಪಾಳಕ್ಕೆ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೂ ಕೈಯಿಂದ ಕಪಾಳಕ್ಕೆ ಬೆನ್ನ ಮೇಲೆ ಹೊಡೆದು ಕಾಲಿನಿಂದ ಒದ್ದಿರುತ್ತಾರೆ ಎಂದರೆ ಸರಿ. 3 ನೇ ಅ ರೋಪಿ ಕೈಹಿಡಿದು ಎಳೆದಾಡಿ ಸೀರೆ ಹಿಡಿದು ಜಗ್ಗಾಡಿರುತ್ತಾನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಆರೋಪಿ ನನಗೆ ಹೊಡೆದಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಚಾಸಾ-7 ರಿಂದ 11 ರವರು ಜಗಳ ಬಿಡಿಸಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ರೀತಿ ಪೋಲಿಸರ ಎದರು ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು,
ಆಳಂದ